<u>ದಿನಾಂಕ **29.01.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟಿ ಸವಾಲು ಃ ಪ್ರತಿವಾದಿ ಪರ ವಕೀಲರಿಂದ</u>

ನಾನು ದ್ವಿತೀಯ ಪಿಯು ವರೆಗೆ ವ್ಯಾಸಂಗ ಮಾಡಿರುತ್ತೇನೆ. ನನ್ನ ಆರೋಗ್ಯ ಸರಿ ಇಲ್ಲದ ಕಾರಣ ಕೆಲಸ ಬಿಟಿರುತ್ತೇನೆ. ನಾನು ಕೆಲಸ ಬಿಟ್ಟು 1 ವರ್ಷ ಆಗಿರುತ್ತದೆ. ಸತ್ತಿಗೌಡ ಬಿನ್ ಲೇಟ್ ನಿಂಗಪ್ಪ ನನ್ನ ಚಿಕ್ಕ ಮಾವ . ನಾಗರಾಜು ಬಿನ್ ನಿಂಗಪ್ಪ ನನ್ನ ಮಾವ . ನನ್ನ ಮಾವ ನಾಗರಾಜು ಮೃತಪಟ್ಟಿರುತ್ತಾರೆ. ನನ್ನ ಪತಿಯವರು ಚಿಕ್ಕ ವಯಸ್ಸಿನಲ್ಲಿದ್ದಾಗಲೇ ನನ್ನ ಮಾವ ಮೃತ ಪಟ್ಟಿರುತ್ತಾರೆಂದು ನನ್ನ ಪತಿಯವರಿಂದ ತಿಳಿದು ಬಂದಿರುತ್ತದೆ. ದಾವಾ ಅನುಸೂಚಿ ಸ್ವತ್ತುಗಳು ಪಿತ್ರಾರ್ಜಿತ ಸ್ವತ್ತುಗಳು ದಾವಾ ಸ್ವತ್ತುಗಳನ್ನು ಮುಂಚಿತವಾಗಿಯೇ ನನ್ನ ಚಿಕ್ಕ ಮಾವ, ಮಾವ ಮತ್ತು ಇತರರು ಹಂಚಿಕೊಂಡಿರುತ್ತಾರೆ ಎಂದರೆ ಸರಿ. ಆ ರೀತಿಯ ಸ್ವತ್ತಿನಲ್ಲಿ ಸತ್ತಿಗೌಡರ ಹೆಸರಿನಲ್ಲಿ ಇದ್ದಂತಹ ಸ್ವತ್ತುಗಳನ್ನು ಸಹ ಈ ದಾವೆಯಲ್ಲಿ ಸೇರಿಸಿರುತ್ತೇವೆ ಎಂದರೆ ಸರಿಯಲ್ಲ. ನಿಪಿ 2 ರಿಂದ 7 ಪಹಣಿ ಪತ್ರಿಕೆಗಳು ಸತ್ತಿಗೌಡರ ಹೆಸರಿನಲ್ಲಿದೆ ಎಂದರೆ ಸರಿ ನನ್ನ ಚಿಕ್ಕ ಮಾವ ಕೆಲವೊಂದು ಆಸ್ತಿಗಳನ್ನು ಹೊಂದಿದ್ದು ಅದನ್ನು ಮೊದಲೇ ಹಂಚಿಕೊಂಡಿದ್ದಾಗಿರುತ್ತದೆ. ನಿಪಿ 10 ರಿಂದ 12 ನಾಗರಾಜು ಬಿನ್ ನಿಂಗಪ್ಪ ರವರ ಹೆಸರಿನಲ್ಲಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ 10 ರಿಂದ 12 ಸ್ವತ್ತುಗಳು ಬೇರೆ ನಾಗರಾಜುರವರಿಗೆ ಸೇರಿದ ಸ್ವತ್ತುಗಳು ನನ್ನ ಪತಿಯ ಕುಟುಂಬಕ್ಕೆ ಅದು ಯಾವ ರೀತಿಯಲ್ಲೂ ಸಂಬಂಧವನ್ನು ಹೊಂದಿರುವುದಿಲ್ಲ ಎಂದರೆ ಪಹಣಿಯನ್ನು ತಮ್ಮ ಹೆಸರಿಗೆ ಬದಲಾಯಿಸಿಕೊಂಡಿದ್ದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಿಪಿ 5 ರಿಂದ 12 ನಮೂದಾಗಿರುವ ಸ್ವತ್ತುಗಳು ದಾವಾ ಷೆಡ್ಯೂಲ್ ಸ್ವತ್ತುಗಳಲ್ಲಿ ಇರುವುದಿಲ್ಲ ಎಂದರೆ ನನ್ನ ಚಿಕ್ಕ ಮಾವ ದಾಖಲಾತಿಯನ್ನು ನನಗೆ ಕೊಟ್ಟಿದ್ದು ಎಂದು ಹೇಳುತ್ತಾರೆ. ದಾವಾ ಐಟಂ ನಂ. 3 , 5 ರಿಂದ 12 ಅನುಸೂಚಿ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿ . ಕೆಲವೊಂದು ದಾಖಲಾತಿಯನ್ನು ಕೊಟ್ಟಿರುವುದಿಲ್ಲ. ನನ್ನ ಅತ್ತೆಯವರು ಅವರವರ ಹಿಸ್ಸೆಗೆ ಬಂದಂತಹ ಹಿಸ್ಸೆಗಳಲ್ಲಿ ಅನುಭೋಗದಲ್ಲರುತ್ತಾರೆ ಎಂದರೆ ಸರಿ . ನನ್ನ ಅತ್ತೆಯ ಪಾಲಿಗೆ ಬಂದಂತಹ ಸ್ವತ್ತಿನಲ್ಲಿ ನನ್ನ ಪತಿ ಹಾಗೂ ಅವರ ಸಹೋದರರು 12.09.2018 ರಂದು ಪಾಲು ಪಾರಿಕತ್ತು ಪತ್ರವನ್ನು ಮಾಡಿಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ. ಅವರರವರ ಹೆಸರಿಗೆ ಬಂದಂತಹ ಸ್ವತ್ತುಗಳನ್ನು ಪ್ರತ್ಯೇಕ ಖಾತೆ ಮಾಡಿಕೊಂಡು ಅವರವರ ಅನುಭೋಗದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಆದರೆ ಇತ್ತೀಚೆಗೆ ಖಾತೆ ಮಾಡಿಕೊಂಡಿದ್ದಾರೋ ಇಲ್ಲವೋ ಗೊತ್ತಿಲ್ಲ. 2022 ರಲ್ಲಿ ನ್ಯಾಯಾಲಯದ ಆದೇಶದ ಮೇರೆಗೆ ನನಗೂ ಮತ್ತು 1ನೇ ಪ್ರತಿವಾದಿಯ ನಡುವೆ ವಿವಾಹ ವಿಚ್ಛೇದನ ಆಗಿರುತ್ತದೆ ಎಂದರೆ ಸರಿ. ನನ್ನ ಇಬ್ಬರು ಮಕ್ಕಳು ಮೇಜರ್ ಆಗಿರುತ್ತಾರೆ. ನಾನು ಈ ದಾವೆಯನ್ನು ಸಲ್ಲಿಸುವಾಗ ನನ್ನ ಮಕ್ಕಳ ವಯಸ್ಸನ್ನು ಸುಳ್ಳಾಗಿ ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ. ಯಶಸ್ವಿನಿಗೆ 13 ನಂದನ್ ಗೆ 11 ವರ್ಷ ಎಂದು ನಮೂದು ಮಾಡಿಸಿರುತ್ತೇನೆ ಎಂದರೆ ಸರಿ. ಅದು ತಪ್ಪಾಗಿರುವುದಿಲ್ಲ ಎಂದು ಹೇಳುತ್ತಾರೆ. ನನ್ನ ಮಕ್ಕಳು ಪ್ರಾಪ್ತ ವಯಸ್ಕರಾಗಿದ್ದು ದಾವೆಯನ್ನು ನಡೆಸಲು ಬುದ್ದಿ ಶಕ್ತರಾಗಿರುತ್ತಾರೆ ಎಂದರೆ ಸರಿ. ದಾವಾ ಸ್ವತ್ತಿಗೂ ಹಾಜರು ಪಡಿಸಿದ ದಾಖಲಾತಿಗೂ ಯಾವುದೇ ಸಂಬಂಧ ಇಲ್ಲದ ಕಾರಣ ದಾವಾ ಪರಿಹಾರ ಪಡೆಯಲು ಅರ್ಹಳಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 1 ರವರನ್ನು ಹೊರತು ಪಡಿಸಿ ಬೇರೆಯವರ ಮೇಲೆ ಪರಿಹಾರ ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಚನ್ನರಾಯಪಟ್ಟಣ.